ಏನಾದರೂ ಕೇಳುವುದಿದ್ದರೆ ಕೇಳಿ. ಮೊದಲು ಬ್ಯಾಲೆಟ್‌ಗೆ ಹಾಕಿದಾಗ ಫಸ್ಟ್ ಯಾರ ಹೆಸರು ಬಂದಿರುತ್ತದೋ ಅವರ ಹೆಸರಿಗೆ ಮಾಡಿರುತ್ತೇವೆ. ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಪ್ರತಾಪ್ ಚಂದ್ರ ಶೆಟ್ಟರು ಬಂದಿದ್ದಾರೆಯೇ? ಅವರು ಇಲ್ಲ ಅಂದರೆ ತಾವು ಎರಡನೆಯವರು. ತಾವೇ ಪ್ರಶ್ನೆಯನ್ನು ಕೇಳಿ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ಉಂಟಾಗಿರುವ ಹಾನಿ

253 (2019)-ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) 1995-96, 1996-97ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ಉಂಟಾಗಿರುವ ಹಾನಿಯ ಪ್ರಮಾಣವೆಷ್ಟು (ಮನೆ ಇತರ ಸ್ವತ್ತು ಭೂಮಿ, ಇತ್ಯಾದಿ ಪ್ರತ್ಯೇಕ ವಿವರ ನೀಡುವುದು)

ಆ) ಸಮುದ್ರ ಕೊರೆತ ತಡೆಯಲು ಸರಕಾರದವರು ತೆಗೆದುಕೊಂಡಿರುವ ಕ್ರಮಗಳೇನು:

ಇ) ರಕ್ಷಣಾ ಗೋಡೆ ರಚನೆಗಾಗಿ ಈ ಅವಧಿಯಲ್ಲಿ ಸರ್ಕಾರದವರು ವೆಚ್ಚ ಮಾಡಿದ ಹಣವೆಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಕಡಲ ತೀರದಲ್ಲಿ 1995-96ರಲ್ಲಿ 3263 ಮೀ. ಹಾಗೂ 1996-97ನೇ ಸಾಲಿನಲ್ಲಿ 2372 ಮೀ. ಉದ್ದಕ್ಕೂ ಕೊರತೆ ಉಂಟಾಗಿದೆ. ಕೊರೆತದಿಂದ ಹಾನಿಗೊಳಗಾದ ಆಸ್ತಿ, ಪಾಸ್ತಿಗಳ ಅದ ಈ ಕೆಳಗಿನಂತಿದೆ.

ಉಡುಪಿ ತಾಲ್ಲೂಕಿನಲ್ಲಿ 1995-96ರ ಸಾಲಿನಲ್ಲಿ 0.41 ಎಕರೆ ಭೂಮಿ ಕೊರೆತಕ್ಕೊಳಗಿದ್ದು, ಸುಮಾರು 10 ತೆಂಗಿನ ಮರಗಳು 1996-97ರಲ್ಲಿ 0.08 ಎಕರೆ ಜಮೀನುಗಳು ಕೊರೆತಕ್ಕೊಳಗಾಗಿದ್ದು, 6 ತೆಂಗಿನ ಮರಗಳು ಮೀನಿನ ಸೆಡ್ ಹಾಗೂ 3 ವಿದ್ಯುತ್ ಕಂಭಗಳು ಸಮುದ್ರ ಪಾಲಾಗಿವೆ.

ಮಂಗಳೂರು ತಾಲ್ಲೂಕಿನಲ್ಲಿ 1995ರಲ್ಲಿ ಉಳ್ಳಾಲ ಸಸಿಹಿತ್ಲು, ಮುಕ್ಕ, ಹೊಸಭಾ, ಕುಳಾಯಿ, ಗುಡಕೊಪ್ಪಗಳಲ್ಲಿ ಸಮುದ್ರ ಹೊಡೆತ ಉಂಟಾಗಿದ್ದು, 135 ಕುಟುಂಬಗಳನ್ನು ಈ ಕೊರೆತದಿಂದ 10 ಮನೆಗಳು ಪೂರ್ತಿಯಾಗಿ ಹಾಗೂ 30 ಮನೆಗಳು ಭಾಗು ಹಾನಿಯಾಗಿವೆ.

ಆ) ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರವು ಸಮುದ್ರ ಕೊರೆತ ರಕ್ಷಣಾ ತಡೆಗೋಡೆಗಳನ್ನು 1979-80 ರಿಂದಲೂ ನಿರ್ಮಿಸಲಾಗಿದೆ

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1995-96, 1996-97ನೇ ಸಾಲುಗಳಲ್ಲಿ ರಕ್ಷಣಾ ಗೋಡೆ ರಚನೆಗಾಗಿ ಕ್ರಮವಾಗಿ ರೂ. 380.27 ಲಕ್ಷ ಮತ್ತು 375.85 ಲಕ್ಷ ಹಣವನ್ನು ವೆಚ್ಚ ಮಾಡಲಾಗಿದೆ.

ವಿಷಯ : ಸಮುದ್ರ ಕೊರೆತವನ್ನು ನಿಲ್ಲಿಸಲು ಕೈಗೊಂಡ ಶಾಶ್ವತ ಕ್ರಮಗಳು

253 (2369)-ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸಮುದ್ರ ಕೊರೆತವನ್ನು ನಿಲ್ಲಿಸಲು ಸರ್ಕಾರವು ಕೈಗೊಂಡಿರುವ ಶಾಶ್ವತ ಕ್ರಮಗಳೇನು

ಆ) ಅದನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರವು ಸಮುದ್ರ ಕೊರೆತ ತಡೆಗೋಡೆಗಳನ್ನು 1979-80 ರಿಂದಲೂ ನಿರ್ಮಿಸಲಾಗುತ್ತಿದೆ. ಈ ತಡೆಗೋಡೆಗಳನ್ನು ನಿರ್ದೇಶಕರು ಕೆ.ಇ.ಓಆರ್.ಎಸ್. ಕೆ.ಆರ್. ಸಾಗರ ಮತ್ತು ನಿರ್ದೇಶಕರು, ಕೆ. ಇ.ಆರ್. ಎಸ್, ಕೆ. ಆರ್. ಸಾಗರ ಮತ್ತು ನಿರ್ದೇಶಕರು, ಸೆಂಟ್ರಲ್ ವಾಟರ್ ಅಂಡ್ ಪವರ್ ರಿಸರ್ಚ್ ಸ್ಟೇಷನ್ ಮಣಿ, ಇವರುಗಳು ನೀಡಿರುವ ವಿನ್ಯಾಸದಂತೆ ನಿರ್ಮಿಸಲಾಗುತ್ತಿದೆ.

ಆ) ಸಮುದ್ರ ಕೊರೆತವನ್ನು ತಡೆಗಟ್ಟಲು ಸರ್ಕಾರವು 1979-80ರಿಂದ ಸಮುದ್ರ ಕೊರೆತ ತಡೆಗೋಡೆಗಳನ್ನು ನಿರ್ಮಿಸಲಾಗುತ್ತಿದ್ದು, ಇದಕ್ಕಾಗಿರಾಜ್ಯ ಆಯವ್ಯಯದಲ್ಲಿ ಅನುದಾನವನ್ನು ಮೀಸಲಾಗಿಡಲಾಗುತ್ತದೆ. ಇದಲ್ಲದೆ, ಕರ್ನಾಟಕ ಕರಾವಳಿ ತೀರದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಒಟ್ಟು 211.316 ಕಿ.ಮೀ. ಉದ್ದ ತಡೆಗೋಡೆಯನ್ನು ನಿರ್ಮಿಸಲು ಒಂದು ಸಮಗ್ರ ಯೋಜನೆಯನ್ನು 847.00 ಕೋಟಿ ರೂ.ಗಳಿಗೆ ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ್ದು, ಈ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರವರು ಮಾಡಿರುವ ಕೆಲವೊಂದು ಆಕ್ಷೇಪಣೆಗಳಿಗೆ ಅನುಗುಣವಾಗಿ ಪುನಃ 572.161 ಕೋಟಿ ರೂ.ಗಳಿಗೆ ಯೋಜನೆ ಆ ತಯಾರಿಕೆಯ ಹಂತದಲ್ಲಿದೆ.